1558ನೇ 6 ನಿ:72 126 4RR

# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಟಿ.ಎನ್. ಜವರಾಯಿಗೌಡ ರವರು ನಿಯಮ-72 ರಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ

**ಪ್ರಶ್ನೆ:** "Tricolour Investment and Properties Pvt. Ltd (Indian Estate) ಎಂಬ ಸಂಸ್ಥೆಯು ಹಾಸನ ಜಿಲ್ಲೆ ಬೇಲೂರು ತಾಲ್ಲೂಕು, ಅರೆಹಳ್ಳಿ, ಸ.ನಂ. 23/3 ಮತ್ತು 20/2 ರಲ್ಲಿ, ಅನಧಿಕೃತವಾಗಿ ಫಾರಂ ಲ್ಯಾಂಡ್ ಅನ್ನು ನಿರ್ಮಿಸಿ ಮಾರಾಟ ಮಾಡುವ ನೆಪದಲ್ಲಿ ಈ ಸಂಸ್ಥೆಯು ಜನರಿಂದ ಮುಂಗಡವಾಗಿ ಲಕ್ಷಾಂತರ ರೂಗಳ ಹಣ ಪಡೆದು ಮೋಸ ಮಾಡಿ ಸಂಬಂಧಪಟ್ಟವರು ತಲೆತಪ್ಪಿಸಿಕೊಂಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ. ಸದರಿ ಸಂಸ್ಥೆಯ ವ್ಯವಸ್ತಾಪಕ ನಿರ್ದೇಶಕರು ಹಾಗೂ ಮ್ಯಾನೇಜರ್ ರವರುಗಳ ವಿರುದ್ಧ ಅರೆಹಳ್ಳಿ ಪೋಲೀಸ್ ಠಾಣೆ ಹಾಗೂ ಹಾಸನದ ಸೆನ್ ಪೋಲೀಸ್ ಠಾಣೆಗಳಲ್ಲಿ ಹಲವಾರು ದೂರುಗಳು ಹಾಗೂ ಎಫ್.ಐ.ಆರ್ ದಾಖಲಾಗಿರುವುದು ತಿಳಿದುಬಂದಿದೆ. ಆದಾಗ್ಯೂ, ಹಾಸನ ಜಿಲ್ಲಾ ಪೋಲೀಸರು ಇಲ್ಲಿಯವರೆಗೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ ತಿಳಿದಿರುತ್ತದೆ. ಆದ್ದರಿಂದ, ಸದರಿ ಸಂಸ್ಥೆಯ ವಿರುದ್ಧ ಸೂಕ್ತ ಕಾನೂನಿನ ಕ್ರಮ ಕೈಗೊಂಡು ನೊಂದವರಿಗೆ ನ್ಯಾಯ ಕೊಡಿಸುವ ಬಗ್ಗೆ.

**ಉತ್ತರ:**

Tricolour investment & properties Private. LTD (Indian Estate) ಎಂಬ ಸಂಸ್ಥೆಯು ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು, ಅರೇಹಳ್ಳಿ, ಸ.ನಂ.23/3 ಮತ್ತು 20/2 ರಲ್ಲಿ ಅನಧಿಕೃತವಾಗಿ ಫಾರಂ ಲ್ಯಾಂಡ್ ಅನ್ನು ನಿರ್ಮಿಸಿ ಮಾರಾಟ ಮಾಡುವ ನೆಪದಲ್ಲಿ ಜನರಿಂದ ಮುಂಗಡವಾಗಿ ಲಕ್ಷಾಂತರ ರೂ.ಗಳ ಹಣ ಪಡೆದು ಮೋಸ ಮಾಡಿದ್ದು, ಸದರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮ್ಯಾನೇಜರ್ ರವರುಗಳ ವಿರುದ್ಧ ಹಾಸನ ಜಿಲ್ಲೆ ಸೆನ್ ಪೊಲೀಸ್ ಠಾಣೆಯಲ್ಲಿ ಮೊ.ನಂ. 73/2024 ಕಲಂ 66 (ಡಿ) ಐಟಿ ಆಕ್ಟ್, 419, 420 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತದೆ. ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಇದರ ಸಂಬಂಧ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ.

**ಪ್ರಕರಣದ ಸಂಕ್ಷಿಪ್ತ ಮಾಹಿತಿ**: ಈ ಕೇಸಿನ ಫಿರ್ಯಾದಿ ಶ್ರೀ ಬಿ.ಎಂ.ಚಂದ್ರಶೇಖರ್ ರವರು ಠಾಣೆಗೆ ಹಾಜರಾಗಿ ಕೊಟ್ಟ ದೂರಿನ ಸಾರಾಂಶವೇನೆಂದರೆ, ಫಿರ್ಯಾದಿ ಮಗಳು ನಿಖಿತಾ ಬಿ.ಸಿ. ರವರಿಗೆ ಜಮೀನನ್ನು ಹುಡುಕುತ್ತಿರುವಾಗ 2022ನೇ ಸಾಲಿನ ಜನವರಿ ತಿಂಗಳಿನಲ್ಲಿ ಫಿರ್ಯಾದಿ Facebook ನಲ್ಲಿ ನೋಡುತ್ತಿದ್ದಾಗ Tricolour Investment and Properties Pvt Ltd ಎಂಬ ಖಾತೆಯನ್ನು ನೋಡಿದ್ದು, ಸದರಿ Facebook ಖಾತೆಯಲ್ಲಿ ಪ್ರಕಟಿಸಲಾಗಿದ್ದ ಜಾಹಿರಾತಿನಲ್ಲಿ Buy One or Two Acres Coffee Estate and Farm House in Sakaleshapur @ 25 lakhs/Acre ಎಂಬುದಾಗಿ ನಮೂದಿಸಿದ್ದು, ಫಿರ್ಯಾದಿ ಸದರಿ ಜಾಹಿರಾತನ್ನು ನೋಡಿ ಅದರಲ್ಲಿ ನಮೂದಿಸಿದ ದೂರವಾಣಿ ಸಂ: 9483807666 ಅನ್ನು ಸಂಪರ್ಕಿಸಿದಾಗ, ಶ್ರೀ ಗಣೇಶ್ ಎಂಬ ವ್ಯಕ್ತಿ ಮಾತನಾಡಿದ್ದು, ಸದರಿಯವರು, Tricolour Investment and Properties Pvt Ltd (Indian Estates) ನ ಸೇಲ್ ಏಜೆಂಟ್ ಎಂಬುದಾಗಿ ತಿಳಿಸಿ, ಬೇಲೂರು ತಾಲ್ಲೂಕಿನ ಅರೆಹಳ್ಳಿ ಗ್ರಾಮದ ಸರ್ವೆ ಸಂ: 23/3, 20/2 ಗಳಲ್ಲಿನ ಕಾಫಿ ಎಸ್ಟೇಟ್ Farm Land ಅನ್ನು ಅಭಿವೃದ್ಧಿ ಪಡಿಸುತ್ತಿರುವುದಾಗಿ ತಿಳಿಸಿ, ಕಂಪನಿಯ MD ಶ್ರೀ ಪವನ್ ರವರ ಪರಿಚಯ ಮಾಡಿಕೊಟ್ಟಿದ್ದು, ನಂತರ ಫಿರ್ಯಾದಿ ದಿನಾಂಕ: 16-02-2022 ರಂದು ಶ್ರೀ ಪವನ್ ರವರನ್ನು ಭೇಟಿ ಮಾಡಿದ್ದು, ಫಿರ್ಯಾದಿ ಹೆಂಡತಿ ಶ್ರೀಮತಿ

ವಸಂತಕುಮಾರಿ ಸಿ ರವರ ಐಸಿಐಸಿಐ ಬ್ಯಾಂಕ್ ಖಾತೆ ನಂ 625301223930 ರಿಂದ ರೂ 7,50,000/- ಹಣದ ಚೆಕ್ ನಂ 044044 ಅನ್ನು ನೀಡಿದ್ದು, ಪವನ್ ರವರು ರೂ 250/- ಇ ಸ್ಟ್ಯಾಂಪ್ ನಲ್ಲಿ Agreement to sell-Coffee estate ಎಂಬುದಾಗಿ ಫಿರ್ಯಾದಿ ಹೆಂಡತಿ ಹೆಸರಿಗೆ ಅಗ್ರಿಮೆಂಟ್ ಮಾಡಿಕೊಟ್ಟಿರುತ್ತಾರೆ.

ಮುಂದುವರೆದು, ಫಿರ್ಯಾದಿ ಮಗಳು ನಿಖಿತಾ ರವರು ಅವರ ಎಸ್.ಬಿ.ಐ ಖಾತೆ ನಂ 54060214692 ರಿಂದ ದಿನಾಂಕ: 19-02-2022 ರಂದು NEFT/RTGS NO. SBIN 522020442167 ಮೂಲಕ ರೂ 4,50,000/- ಹಣವನ್ನು ಹಾಗೂ ದಿನಾಂಕ: 24-02-2022 ರಂದು NEFT NO. SBIN 422055629195 ರ ಮೂಲಕ ರೂ. 3,00,000/- ಒಟ್ಟು ರೂ 7,50,000/- ಹಣವನ್ನು ಅವರು ತಿಳಿಸಿದ Tricolour investment and properties pvt ltd ಖಾತೆ ನಂ 015205014400, ಐಎಫ್ಎಸ್‌ಸಿ ಕೋಡ್ ICIC0000152, ಕೆ.ಡಿ.ರಸ್ತೆ ಬ್ರಾಂಚ್, ಮೈಸೂರು ಇಲ್ಲಿಗೆ ಜಮಾ ಮಾಡಿದ್ದು, ದಿನಾಂಕ: 16-03-2022 ರಂದು ಪವನ್ ರವರು ರೂ 250/- ಇ ಸ್ಟ್ಯಾಂಪ್ ನಲ್ಲಿ Agreement to sell-Coffee estate ಎಂಬುದಾಗಿ ನಿಖಿತಾ ರವರ ಹೆಸರಿಗೆ ಅಗ್ರಿಮೆಂಟ್ ಮಾಡಿಕೊಟ್ಟಿದ್ದು, 6 ತಿಂಗಳ ಒಳಗೆ ಕಂಪೆನಿಯವರು ದಾಖಲಾತಿಗಳನ್ನು ಹೊಂದಿಸಿಕೊಂಡು ಬಂದು ರಿಜಿಸ್ಟ್ರೇಷನ್ ಮಾಡಿಕೊಡುವ ಸಮಯದಲ್ಲಿ ಉಳಿದ ಹಣವನ್ನು ನೀಡುವಂತೆ ಅಗ್ರಿಮೆಂಟ್ ಮಾಡಿಕೊಟ್ಟಿದ್ದು, 6 ತಿಂಗಳ ಅಗ್ರಿಮೆಂಟ್ ಮುಗಿದರೂ ಸಹ ರಿಜಿಸ್ಟರ್ ಮಾಡಿಕೊಡದ ಕಾರಣ ವಿಚಾರ ಮಾಡಲಾಗಿ ದಾಖಲಾತಿಗಳನ್ನು ಸರಿಪಡಿಸಲಾಗುತ್ತಿರುವುದಾಗಿ ತಿಳಿಸುತ್ತಾ ಬಂದಿದ್ದು, ಇದುವರೆಗೂ ಜಮೀನನ್ನು ರಿಜಿಸ್ಟರ್ ಮಾಡಿಕೊಡದೆ ಹಣವನ್ನು ವಾಪಸ್ ಕೊಡದೆ ಮೋಸ ಮಾಡಿರುತ್ತಾರೆಂದು ಸದರಿ ಕಂಪೆನಿ ಮತ್ತು ಸಿಬ್ಬಂದಿಯವರ ಮೇಲೆ ಸೂಕ್ತ ಕಾನೂನು ರೀತ್ಯಾ ಕ್ರಮ ಕೈಗೊಂಡು ಹಣವನ್ನು ವಾಪಸ್ ಕೊಡಿಸಿಕೊಡಬೇಕೆಂದು ಫಿರ್ಯಾದಿ ಠಾಣೆಗೆ ಹಾಜರಾಗಿ ಕೊಟ್ಟ ದೂರಿನ ಮೇರೆಗೆ ಎಫ್. ಐ. ಆರ್ ದಾಖಲಿಸಲಾಗಿದೆ.

**<u>ಪ್ರಕರಣದ ತನಿಖೆಯ ವಿವರಗಳು:</u>**

ದಿನಾಂಕ: 23/11/2022 ರಂದು ಸದರಿ ಪ್ರಕರಣದಲ್ಲಿ ಅನುಘಟ್ಟ ಸರ್ವೆ ನಂ 23/*/3 ಮತ್ತು 20/*/2 ರ ದಾಖಲಾತಿಗಳನ್ನು ನೀಡುವಂತೆ ಕೋರಿ ಬೇಲೂರು ತಾಲ್ಲೂಕು ತಹಶೀಲ್ದಾರ್ ಕಛೇರಿ, ಎಡಿಎಲ್‌ಆರ್ ಕಛೇರಿ ಮತ್ತು ಉಪ ನೊಂದಣಾಧಿಕಾರಿಯವರ ಕಛೇರಿಗಳಿಗೆ ಅಂಚೆ ಮೂಲಕ ಪತ್ರ ವ್ಯವಹಾರ ಮಾಡಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಜಮೀನಿನ ಮಾಲೀಕರಾದ ರೇಣುಕಾನಂದ.ಬಿ.ಎನ್ ಮತ್ತು ಜಮೀನಿನ ಜಿಪಿಎ ಮಾಲೀಕರಾದ ಬಿ.ಎಂ ನಂದೀಶ್ ರವರುಗಳಿಗೆ ಠಾಣೆಗೆ ಹಾಜರಾಗಿ ಹೇಳಿಕೆ ನೀಡುವಂತೆ ಸೂಚಿಸಿ ಪೊಲೀಸ್ ನೋಟೀಸ್‌ನ್ನು ಅಂಚೆ ಮೂಲಕ ಕಳುಹಿಸಿಕೊಟ್ಟಿರುತ್ತದೆ.

ದಿನಾಂಕ: 08/12/2024 ರಂದು ಅನುಘಟ್ಟ ಸರ್ವೆ ನಂ 23/*/3 ರ ಜಮೀನಿನ ಜಿಪಿಎ ಮಾಲೀಕರಾದ ಬಿ.ಎಂ ನಂದೀಶ್ ರವರಿಗೆ ಠಾಣೆಗೆ ಹಾಜರಾಗಿ ಹೇಳಿಕೆ ನೀಡುವಂತೆ ಸೂಚಿಸಿ ಪೊಲೀಸ್ ನೋಟೀಸ್‌ನ್ನು ಅಂಚೆ ಮೂಲಕ ಕಳುಹಿಸಿಕೊಟ್ಟಿದ್ದು, ಸದರಿಯವರು ವಿಳಾಸದ ಮನೆಯಲ್ಲಿ ಇಲ್ಲದೆ ಇದ್ದು, ಸದರಿಯವರು ಮನೆಗೆ ಬೀಗ ಹಾಕಿಕೊಂಡು ಹೋಗಿದ್ದು, ಮೂರು ದಿನಗಳ ಕಾಲ ವಿಳಾಸಕ್ಕೆ ಹೋಗಲಾಗಿ ಮನೆಯ ಬೀಗ

ಹಾಕಿರುವುದಾಗಿ ಯಾರೂ ಸಹ ವಿಳಾಸದಲ್ಲಿ ಅಂಚೆಯನ್ನು ನೀಡಲು ಇರುವುದಿಲ್ಲವೆಂದು ಅಂಚೆ ಕಛೇರಿಯಿಂದ ಷರಾ ಬರೆದು ವಾಪಸ್ ಕಳುಹಿಸಲಾಗಿರುತ್ತದೆ.

ದಿನಾಂಕ: 04/01/2025 ರಂದು ತನಿಖಾಧಿಕಾರಿಗಳು ಖುದ್ದಾಗಿ ಅನುಘಟ್ಟ ಗ್ರಾಮಕ್ಕೆ ಹೋಗಿ ವಿಚಾರ ಮಾಡಲಾಗಿ ಅನುಘಟ್ಟ ಸರ್ವೆ ನಂ 23/*/3 ರ ಜಮೀನಿನ ಜಿಪಿಎ ಮಾಲೀಕರಾದ ಬಿ.ಎಂ ನಂದೀಶ್ ರವರನ್ನು ವಿಚಾರ ಮಾಡಲಾಗಿ, ಸದರಿ ಜಮೀನು ಅವರ ಪಿತ್ರಾರ್ಜಿತ ಜಮೀನಾಗಿದ್ದು, ಅವರ ಮಗ ರೇಣುಕಾನಂದನಿಗೆ ವಿಭಾಗ ಮಾಡಿಕೊಟ್ಟಿದ್ದು, ಆತ ಮಾನಸಿಕವಾಗಿ ಅಸ್ವಸ್ಥನಾಗಿರುವುದರಿಂದ ಜಮೀನಿನ ವ್ಯವಹಾರಗಳಿಗೆ ನನ್ನ ಹೆಸರಿಗೆ ನೋಂದಣಿ ಕಛೇರಿಯಲ್ಲಿ ಜಿಪಿಎ ಮಾಡಿಸಿಕೊಂಡಿರುತ್ತೇನೆ ಎಂದು ತಿಳಿಸಿರುತ್ತಾರೆ.

ಈ ಜಮೀನನ್ನು ಯಾರಿಗೂ ಮಾರಾಟ ಮಾಡಿರುವುದಿಲ್ಲ. ತಮ್ಮ ಜಮೀನಿನ ಪಕ್ಕದಲ್ಲಿದ್ದ ತಮ್ಮ ಸಂಬಂಧಿಕರ ಜಮೀನಿನಲ್ಲಿದ್ದ ಒಂದು ಮನೆಯಲ್ಲಿ 5 ವರ್ಷಗಳ ಹಿಂದೆ ಪವನ್ ಎಂಬುವವರು ರೆಸಾರ್ಟ್ ಮಾಡಿಕೊಂಡಿದ್ದು, ಪಕ್ಕದಲ್ಲಿಯೇ ಇದ್ದುದರಿಂದ ಪವನ್ ಮತ್ತು ಅಲ್ಲಿ ಕೆಲಸ ಮಾಡುತ್ತಿದ್ದ ಗಣೇಶ್ ಮತ್ತು ಖಾನ್ ರವರುಗಳು ಪರಿಚಯವಿದ್ದರು ಎಂದು ವಿಚಾರಣೆಯಲ್ಲಿ ತಿಳಿಸಿರುತ್ತಾರೆ.

ನಂತರದಲ್ಲಿ ಅವರುಗಳು ರೆಸಾರ್ಟ್‌ನ್ನು ಖಾಲಿ ಮಾಡಿಕೊಂಡು ಹೋಗಿರುತ್ತಾರೆ. ಅವರುಗಳು ಇದ್ದ ಸಮಯದಲ್ಲಿ ರೆಸಾರ್ಟ್‌ಗೆ ಬೆಂಗಳೂರಿನಿಂದ ಜನರು ಬರುತ್ತಿದ್ದರು. ನಂತರ ವಿಚಾರ ತಿಳಿಯಲಾಗಿ ಸದರಿಯವರು Tricolour Investment and Properties Pvt Ltd ಎಂಬುದಾಗಿ ಕಂಪನಿಯನ್ನು ತೆರೆದು ಸದರಿ ಕಂಪನಿಯ ಮೂಲಕ ಸುತ್ತ ಮುತ್ತಲಿನ ಜಮೀನುಗಳನ್ನು ಮಾರಾಟ ಮಾಡುತ್ತಿರುವುದಾಗಿ ವಿಚಾರ ತಿಳಿಯಿತು.

ಅದೇ ರೀತಿ ಸರ್ವೆ ನಂ 23/*/3 ಅನ್ನು ಸಹ ಕಂಪನಿಯ ಸಿಬ್ಬಂದಿಗಳು ಬೆಂಗಳೂರಿನ ಯಾರಿಗೋ ಜಿಪಿಎ ಮಾಡಿಕೊಟ್ಟಿರುವುದಾಗಿ ಪೊಲೀಸರು ತಿಳಿಸಿದ ಮೇರೆಗೆ ವಿಚಾರ ತಿಳಿಯಿತು. ಆದರೆ ನಮ್ಮ ಜಮೀನನ್ನು ಯಾರಿಗೂ ಸಹ ಜಿಪಿಎ ಅಥವಾ ಮಾರಾಟ ಮಾಡಿಕೊಟ್ಟಿರುವುದಿಲ್ಲ ಎಂದು ಜಮೀನಿನ ಮಾಲೀಕರಾದ ಬಿ.ಎಂ ನಂದೀಶ್ ರವರು ತಿಳಿಸಿರುತ್ತಾರೆ.

ಈ ಪ್ರಕರಣದಲ್ಲಿ ಫಿರ್ಯಾದುದಾರರಾದ ಚಂದ್ರಶೇಖರ್ ರವರಿಗೆ ದೂರವಾಣಿ ಮುಖಾಂತರ ಸದರಿ ದೂರಿನಲ್ಲಿ ನೀಡಿರುವ ಅಗ್ರಿಮೆಂಟ್‌ಗಳ ಮೂಲ ದಾಖಲಾತಿಗಳನ್ನು ಕೈಬರಹ ತಜ್ಞರಿಗೆ ಕಳುಹಿಸಲು ಅವಶ್ಯವಿರುವುದರಿಂದ ಫಿರ್ಯಾದಿಯವರಿಗೆ ಮೂಲ ದಾಖಲಾತಿಗಳನ್ನು ಹಾಜರುಪಡಿಸುವಂತೆ ತಿಳಿಸಿದ್ದು, ಇಲ್ಲಿಯವರೆಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರಸ್ತುತ ಪ್ರಕರಣವು ತನಿಖೆಯಲ್ಲಿರುತ್ತದೆ.

ಸಂಖ್ಯೆ: ಹೆಚ್‌ಡಿ 48 ಪಿಸಿಕ್ಯೂ 2025

(ಡಾ:ಜಿ ಪರಮೇಶ್ವರ)
ಗೃಹ ಸಚಿವರು